ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, Pp 1-7
©*IIMRD*, Mysuru
IIMRD JOURNALS
www.iimrd.com

# ಕೃಷ್ಣದೇವರಾಯ ಮತ್ತು ಉಮ್ಮತ್ತೂರು ಪಾಳೆಯ ಪಟ್ಟು ನಡುವಿನ ರಾಜ್ಯಾಧಿಕಾರ ಸಂಬಂಧಗಳು

**ಡಾ. ಜಯರಾಮು[1]**

[1]ಇತಿಹಾಸ ಉಪನ್ಯಾಸಕರು, ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

**ಸಾರಾಂಶ (Abstract)**

*ಭಾರತದ ದೀರ್ಘ ಇತಿಹಾಸದಲ್ಲೇ ಸಮರ್ಥನಾದ ಹಾಗೂ ಪ್ರಖ್ಯಾತನಾದ ಚಕ್ರವರ್ತಿ ಶ್ರೀ ಕೃಷ್ಣದೇವರಾಯ. ಇವನ ಆಗಮನದಿಂದ ಸಾಮ್ರಾಜ್ಯವು ಪ್ರಗತಿ ದಿಗಂತದಲ್ಲಿ ದೈತ್ಯ ಹೆಜ್ಜೆಗಳನ್ನಿಟ್ಟು ಮುನ್ನಡೆಯಿತು. ಕೃಷ್ಣ ದೇವರಾಯನು ದಕ್ಷ ಆಡಳಿತಗಾರ, ಮಹಾ ಸೇನಾನಿ ಮತ್ತು ಕಲಾ ಹಾಗೂ ಸಾಹಿತ್ಯ ಪೋಷಕನಾಗಿದ್ದು, ವಿಜಯನಗರ ಏಳಿಗೆಗೆ ಬಹುಮುಖವಾಗಿ ಶ್ರಮಿಸಿದನು. ಪ್ರಸ್ತುತ ಲೇಖನದಲ್ಲಿ ಕೃಷ್ಣದೇವರಾಯ ಮತ್ತು ಉಮ್ಮತ್ತೂರು ಪಾಳೆಯ ಪಟ್ಟು ನಡುವಿನ ರಾಜ್ಯಾಧಿಕಾರ ಸಂಬಂಧಗಳನ್ನು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಕೃಷ್ಣದೇವರಾಯ, ವಿಜಯನಗರ ಸಾಮ್ರಾಜ್ಯ, ಉಮ್ಮತ್ತೂರು ಪಾಳೆಯಗಾರರು, ಆಡಳಿತಗಾರರು, ಪಟ್ಟಾರೋಹಣ, ಪಾಂಡಿತ್ಯ.

## ಪೀಠಿಕೆ

ಭಾರತದ ಇತಿಹಾಸದಲ್ಲಿ ಕೃಷ್ಣದೇವರಾಯನ ರಾಜ್ಯಭಾರ ಕಾಲಾವಧಿಯು ವಿಜಯನಗರ ಕೀರ್ತಿ ಪರಾಕಾಷ್ಠೆ ಮುಟ್ಟಿದ ಕಾಲ ಅನೇಕ ವಿದ್ವಾಂಸರು ಭಾವಿಸಿರುವಂತೆ 1509ರ ಆಗಸ್ಟ್ 4ರಂದು ಕೃಷ್ಣ ಜನ್ಮಾಷ್ಟಮಿಯ ದಿವಸ ಕೃಷ್ಣದೇವರಾಯನಿಗೆ ಪಟ್ಟಾಭಿಷೇಕವಾಯಿತು. ಹಂಪಿಯ ಹತ್ತಿರವಿರುವ ಸಿಂಗನಾಯಕನ ಹಳ್ಳಿಯಲ್ಲಿ ಇತ್ತೀಚೆಗೆ ದೊರೆತ ಶಾಸನ ಕ್ರಿ.ಶ.1510 ಜನವರಿ 24ರಂದು ಪಟ್ಟಾಭಿಷೇಕವಾಯಿತು ಎಂದು ಶಾಸನತಜ್ಞ ದೇವರಕೊಂಡಾರೆಡ್ಡಿಯವರು ಉಲ್ಲೇಖಿಸಿದ್ದಾರೆ.[1]

ಕೃಷ್ಣದೇವರಾಯ ಅಧಿಕಾರಕ್ಕೆ ಬರಲು ಅವನ ಮಂತ್ರಿಯಾದ ಸಾಳುವ ತಿಮ್ಮರಸನು ಶ್ರಮಿಸಿದನು. ಕೃಷ್ಣದೇವರಾಯನು ಪಟ್ಟಕ್ಕೆ ಬಂದಾಗ ಸುಮಾರು 20–25 ವರ್ಷ ವಯಸ್ಸಿನ ತರುಣ. ಅವನ ಪಟ್ಟಾರೋಹಣ ಕಾಲದಲ್ಲೇ ವಿಜಯನಗರ ಸಾಮ್ರಾಜ್ಯದ ರಾಜಕೀಯ ಪರಿಸ್ಥಿತಿಯು ಉತ್ತಮವಾಗಿರಲಿಲ್ಲ. ಬಹುಮನಿ ಸಾಮ್ರಾಜ್ಯವು ಐದು ಶಾಹಿ ರಾಜ್ಯಗಳಾಗಿ ಬಿಜಾಪುರ, ರಾಯಚೂರು ಕಡೆಯಿಂದ ಅಪಾಯದ

*Please cite this article as: ಡಾ. ಜಯರಾಮು (2021).* ಕೃಷ್ಣದೇವರಾಯ ಮತ್ತು ಉಮ್ಮತ್ತೂರು ಪಾಳೆಯ ಪಟ್ಟು ನಡುವಿನ ರಾಜ್ಯಾಧಿಕಾರ ಸಂಬಂಧಗಳು: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 1–7.*

ಸೂಚನೆಗಳಿದ್ದವು. ಒರಿಸ್ಸಾದ ಗಜಪತಿ ಪ್ರತಾಪ ರುದ್ರನು ವಿಜಯನಗರ ಸಾಮ್ರಾಜ್ಯದ ಈಶಾನ್ಯ ಭಾಗವನ್ನು ಆಕ್ರಮಿಸಲು ಸಿದ್ದನಾಗುತ್ತಿದ್ದ. ಪೋರ್ಚುಗೀಸರು ಪಶ್ಚಿಮ ಕರಾವಳಿಯಲ್ಲಿ ತಮ್ಮ ಹತೋಟಿ ಸ್ಥಾಪಿಸಲು ತಯಾರಾಗಿದ್ದರು. ಹಿಂದೆ ಅನೇಕ ಸಾಮಂತ ರಾಜರುಗಳನ್ನು ಹತ್ತಿಕ್ಕಿದರೂ ಸಹ ಅವರುಗಳು ಸಂಪೂರ್ಣವಾಗಿ ಪತನ ಹೊಂದಿರಲಿಲ್ಲ. ಉಮ್ಮತ್ತೂರಿನ ಪಾಳೇಯಗಾರನೂ ಮೈಸೂರು ಪ್ರಾಂತ್ಯದ ಹಲವಾರು ಪ್ರದೇಶವನ್ನು ಆಕ್ರಮಿಸಿಕೊಂಡಿದ್ದು ಸ್ವತಂತ್ರ್ಯವಾಗಿ ವರ್ತಿಸುತ್ತಿದ್ದ. ಇಂತಹ ಸಂದಿಗ್ಧ ಸಮಯದಲ್ಲಿ ದಿಗ್ವಿಜಯಕಾರ ಕೃಷ್ಣದೇವರಾಯನು ಎಲ್ಲಾ ರಾಜಕೀಯ ಸಮಸ್ಯೆಗಳನ್ನು ಯುಕ್ತಾಯುಕ್ತಾ ಪರ್ಯಾಲೋಚಿಸಿ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ಸುಭದ್ರತೆ ನೆಲೆಸುವಂತೆ ಮಾಡಿ ರಾಜ್ಯಾಧಿಕಾರ ಪ್ರಭಾವವನ್ನು ಸುಸ್ಥಾಪಿಸಿದನು.[2]

ಇದರಲ್ಲಿ ಉಮ್ಮತ್ತೂರಿನ ಪಾಳೇಗಾರನ ಬಂಡಾಯ ಸಮಸ್ಯೆಯನ್ನು ಹತ್ತಿಕ್ಕಿ, ಮೈಸೂರು ಪ್ರಾಂತ್ಯವನ್ನು ರಚಿಸಿ, ದಕ್ಷ ಆಡಳಿತಗಾರರನ್ನು ನೇಮಿಸಿ ಅಧಿಕಾರ ಸ್ಥಾಪಿಸಿದ. ಕೃಷ್ಣದೇವರಾಯನ ಕಾಲದಲ್ಲಿ ಉಮ್ಮತ್ತೂರು ಮತ್ತು ವಿಜಯನಗರ ಸಾಮ್ರಾಜ್ಯದ ನಡುವೆ ಇದ್ದ ರಾಜ್ಯಾಧಿಕಾರ ಸಂಬಂಧಗಳನ್ನು ಈ ಸಂಶೋಧನಾ ಪತ್ರಿಕೆ/ಲೇಖನದಲ್ಲಿ ವಿಶ್ಲೇಷಿಸಿ ವಿಮರ್ಶಿಸಲಾಗಿದೆ. ಆಡಳಿತ ವ್ಯವಸ್ಥೆಗಾಗಿ ವಿಜಯನಗರ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಅವುಗಳನ್ನು ರಾಜ್ಯ, ಮಂಡಲ, ನಾಡು, ಸೀಮೆ, ಚಾವಡಿಗಳೆಂದು ಕರೆಯುತ್ತಿದ್ದರು. ರಾಜ್ಯಗಳನ್ನು ನಾಡು, ಗ್ರಾಮ, ಸ್ಥಳ ಎಂಬ ಉಪವಿಭಾಗಗಳಿದ್ದವು. ಕರ್ನಾಟಕ ವಲಯದ ಪ್ರಾಂತ್ಯಗಳನ್ನು ರಾಜ್ಯಗಳೆಂದು ಕರೆದರೆ, ತಮಿಳುನಾಡಿನ ರಾಜ್ಯಗಳನ್ನು ಮಂಡಲಗಳೆಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ರಾಜಮನೆತನಕ್ಕೆ ಸೇರಿದವರನ್ನು ಪ್ರಾಂತಾಧಿಕಾರಿಯನ್ನಾಗಿ (ರಾಜ್ಯಪಾಲ) ನೇಮಿಸಲಾಗುತ್ತಿತ್ತು.[3]

ವಿಜಯನಗರ ಸಾಮ್ರಾಜ್ಯದಲ್ಲಿ ಪಾಳೇಗಾರರು ಸಣ್ಣ ಸಣ್ಣ ನಾಯಕರಾಗಿ ದಕ್ಷಿಣ ಭಾಗದಲ್ಲಿ ಎಲ್ಲಾ ಕಡೆಗಳಲ್ಲೂ ಹರಡಿಕೊಂಡು ಪ್ರವರ್ಧಮಾನಕ್ಕೆ ಬಂದರು. ಇವರು ತಮ್ಮ ಸಣ್ಣಪುಟ್ಟ ಪ್ರಾಂತ್ಯಗಳಲ್ಲಿ (ಪಾಳೇಯಪಟ್ಟು) ಸರ್ವತಂತ್ರ ಸ್ವತಂತ್ರಕ್ಕಾಗಿ ಪರಮಾಧಿಕಾರವನ್ನು ನಡೆಸುತ್ತಿದ್ದರು. ಈ ಪಾಳೇಗಾರರ ವಿದೇಶಾಂಗ ರಾಜನೀತಿಯು ಕೇಂದ್ರದ ಅಧಿಕಾರದೊಡನೆ ಎಷ್ಟರ ಮಟ್ಟಿಗೆ ಹೆಣೆದುಕೊಂಡಿತ್ತೆಂದರೆ ಇವರ ಕ್ರಿಯಾತ್ಮಕ ಸಹಾಯವಿಲ್ಲದೆ ವಿಜಯನಗರ ಸಾಮ್ರಾಟರು ಹೊರ ಆಕ್ರಮಣವನ್ನು ಎದುರಿಸಿ ಶಾಂತಿ ಹಗೂ ಕಾನೂನು ಸ್ಥಾಪಿಸಿ ವಿಸ್ತಾರವಾದ ತಮ್ಮ ಸಾಮ್ರಾಜ್ಯದಲ್ಲಿ ಕ್ಷೇಮಕರವಾದ ಆಡಳಿತ ವ್ಯವಸ್ಥೆಯನ್ನು ಬೆಳೆಸಲು ಸಾಧ್ಯವಾಗುತ್ತಿರಲಿಲ್ಲ. ಈ ಪಾಳೇಯಗಾರರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಕಂದಾಯ ವಸೂಲಿ ಮಾಡಿ ಕಾನೂನು ಮತ್ತು ನಿಯಮಗಳನ್ನು ಪಾಲಿಸಿ ತಮ್ಮ ಪ್ರದೇಶದ ಸಮಾಜದ ಪಾಲಕರಾಗಿದ್ದರು. ಇವರು ತಮ್ಮ ಪ್ರಜೆಗಳಿಂದ ರಾಜನಂತೆ ಗೌರವ ಮತ್ತು ಬಿರುದಾವಳಿಗಳನ್ನು ಧರಿಸುತ್ತಿದ್ದರು. ಪಾಳೇಯಗಾರರು ವಿಜಯನಗರ ಪ್ರಭುಗಳಿಗೆ ಕಪ್ಪಕಾಣಿಕೆಗಳನ್ನೂ ಯುದ್ಧ ಸಮಯದಲ್ಲಿ ಸೈನ್ಯ ಸಹಾಯವನ್ನು ಮಾಡುತ್ತಿದ್ದರು.

ಒಮ್ಮೊಮ್ಮೆ ಈ ಪಾಳೇಗಾರರು ವಿಜಯನಗರ ಅರಸರ ಪರಮಾಧಿಕಾರವನ್ನು ತ್ಯಜಿಸಿ ಸ್ವತಂತ್ರರಾಗಿ ರಾಜ್ಯ ಸ್ಥಾಪಿಸಿ ವಿಸ್ತರಿಸಲು ಪ್ರಯತ್ನಿಸುತ್ತಿದ್ದರು. ಮೈಸೂರು ಪ್ರಾಂತ್ಯದಲ್ಲಿ ಕಳಲೆ, ಉಮ್ಮತ್ತೂರು, ಚನ್ನಪಟ್ಟಣ, ಯಲಹಂಕ, ಹದಿನಾಡು, ಶಿವನಸಮುದ್ರ, ಶ್ರೀರಂಗಪಟ್ಟಣ, ತೆರಕಣಾಂಬಿ ಪಾಳೇಯಪಟ್ಟುಗಳಿದ್ದು,

ಮಹಾಮಂಡಲೇಶ್ವರ, ಮಹಾ ಪ್ರಧಾನ ಎಂಬು ವಿಜಯನಗರದ ಅಧಿಕಾರಿಗಳು ಆಡಳಿತ ನೋಡಿಕೊಳ್ಳುತ್ತಿದ್ದರು. ಇವು ಶ್ರೀರಂಗಪಟ್ಟಣದ ಪ್ರಾಂತ್ಯಾಧಿಕಾರಿ ವಿಜಯನಗರ ಪ್ರತಿನಿಧಿಯ ಅಧೀನದಲ್ಲಿದ್ದವು.[4]

ಈ ಪಾಳೇಯ ಪಟ್ಟುಗಳಲ್ಲಿ ಉಮ್ಮತ್ತೂರಿನ ನಾಯಕರು ಕೃಷ್ಣದೇವರಾಯನ ಕಾಲದಲ್ಲಿ ಕೇಂದ್ರದ ಪರಮಾಧಿಕಾರವನ್ನು ಕಳಚಿ ಸ್ವತಂತ್ರವಾಗಿ ಬಂಡಾಯವೆದ್ದು, ಪೆನುಗೊಂಡ, ಶಿವನಸಮುದ್ರ, ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ರಾಜ್ಯ ಸ್ಥಾಪಿಸಲು ಪ್ರಯತ್ನಿಸುತ್ತಿದ್ದರು.[5]

ಚಾಮರಾಜ ತಾಲೂಕಿನ ಗ್ರಾಮ ಮಾತ್ರವಾಗಿರುವ ಉಮ್ಮತ್ತೂರು ವಿಜಯನಗರ ರಾಜರ ಕಾಲದ ಮಹತ್ವಪೂರ್ಣ ಪಾಳೇಯಗಾರಿಯಾಗಿದ್ದು, ಉಮ್ಮತ್ತೂರು ಒಡೆಯರ ಕುಲದೇವತೆ ಸೋಮೇಶ್ವರ. ಇವರು ತಮ್ಮನ್ನು ಹೊಯ್ಸಳ ರಾಜಯ ಅಧಿಪತಿಗಳೆಂದು ಕರೆದುಕೊಂಡಿದ್ದರೆ, ಕೊಂಚಕಾಲ ಇವರು ಶಿವನ ಸಮುದ್ರ ಮತ್ತು ತೆರಕಣಾಂಬಿ ಪ್ರಾಂತ್ಯವನ್ನು ಆಳಿದ್ದಿರಬೇಕು. ಇವರ ವಂಶಾವಳಿ ಬಗ್ಗೆ ಎಪಿಗ್ರಾಫಿಯ ಕರ್ನಾಟಕ ಸಂಪುಟ ಮೂರರಲ್ಲಿ ಪೀಠಿಕೆಯಲ್ಲಿ ತಿಳಿಸಲಾಗಿದೆ. ಇವರು 'ಮಹಾಮಂಡಲೇಶ್ವರ", "ಗಜಬೆಂಟೆಕಾರ", "ಪೆನುಗೊಂಡ ಚಕ್ರೇಶ್ವರ" ಎಂಬ ಬಿರುದುಗಳನ್ನು ಧರಿಸಿಕೊಂಡಿದ್ದರು.[6]

ಕೃಷ್ಣದೇವರಾಯನು ಬೀದರ್ ಮತ್ತು ಬಿಜಾಪುರದ ಮೇಲೆ ಯುದ್ಧ ಮಾಡುವಾಗ ಉಮ್ಮತ್ತೂರಿನ ಪಾಳೇಯಗಾರ ಗಂಗರಾಜನು ಸ್ವತಂತ್ರವಾಗಿ ವಿಜಯನಗರ ವಿರುದ್ಧ ದಂಗೆಯೆದ್ದನು. ಶ್ರೀರಂಗಪಟ್ಟಣ ಮತ್ತು ಶಿವನ ಸಮುದ್ರದ ದುರ್ಗಗಳು ಇವನ ಅಧೀನದಲ್ಲಿದ್ದವು. ಇವನು ವೀರನರಸಿಂಹನ ಆಳ್ವಿಕೆಯ ಕೊನೆಗಾಲದಿಂದಲೂ ವಿಜಯನಗರದ ಅಧೀನದಿಂದ ಸ್ವತಂತ್ರನಾಗಲು ಪ್ರಯತ್ನಿಸುತ್ತಿದ್ದರು. ಕೃಷ್ಣದೇವರಾಯನನ್ನು ಕಡೆಗಣಿಸಿ ಪೆನುಗೊಂಡ ದುರ್ಗವನ್ನು ಆಕ್ರಮಿಸಿದನು. ಈ ಸಮಯದಲ್ಲಿ ಸಾಮ್ರಾಜ್ಯದ ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಉಮ್ಮತ್ತೂರಿನ ಗಂಗರಾಜನ ವಿರುದ್ಧ ಕೃಷ್ಣದೇವರಾಯ ಯುದ್ಧಾರಂಭ ಮಾಡಿದನು. ಈ ಯುದ್ಧವು ಸುಮಾರು ಕ್ರಿ.ಶ. 1510ನೆಯ ಆಗಸ್ಟ್ ತಿಂಗಳಿಂದ ಪ್ರಾರಂಭವಾಗಿ ಕ್ರಿ.ಶ. 1512ರವರೆಗೂ ಮುಂದುವರಿದಿರಬೇಕು. ಗಂಗರಾಯನ ಕೈ ಸೇರಿದ ಪೆನುಗೊಂಡೆಯ ಆಕ್ರಮಣದೊಡನೆ ಯುದ್ಧಾರಂಭವಾಯಿತು. ಈ ದುರ್ಗವನ್ನು ವಶಪಡಿಸಿಕೊಂಡ ಮೇಲೆ ಕೃಷ್ಣದೇವರಾಯನು ಉಮ್ಮತ್ತೂರನ್ನು ಗಂಗರಾಜನ ಮುಖ್ಯ ಕಾರ್ಯಸ್ಥಾನವಾದ ಶಿವನ ಸಮುದ್ರವನ್ನು ಆಕ್ರಮಿಸಿದನು. ಶಿವನಸಮುದ್ರವನ್ನು ಹಿಡಿಯಲು ಸುಮಾರು ಒಂದು ವರ್ಷಕಾಲ ಕೃಷ್ಣದೇವರಾಯನುನ್ನು ಹೋರಾಡಬೇಕಾಯಿತು. ಈ ಸಮರದಲ್ಲಿ ಗಂಗರಾಯನು ಪಲಾಯನ ಮಾಡಿ ಸೋಲಿನ ನಿರಾಸೆಯಿಂದ ಕಾವೇರಿ ನದಿಯಲ್ಲಿ ಹಾರಿ ಮೃತನಾದನು. ಅವನ ರಾಜಧಾನಿಯನ್ನು ಕೃಷ್ಣದೇವನು ಜಯಿಸಿದ. ಈ ನೂತನ ರಾಜ್ಯವು ವಿಜಯನಗರ ಸಾಮ್ರಾಜ್ಯದ ನೂತನ ಪ್ರಾಂತ್ಯವಾಯಿತು.[7]

ಶ್ರೀರಂಗಪಟ್ಟಣವನ್ನು ಅದರ ರಾಜಧಾನಿಯನ್ನಾಗಿ (1513) ಮಾಡಿದನು. ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳಲು ತನ್ನ ಮಂತ್ರಿ ಸಾಳುವ ತಿಮ್ಮರಸನ ತಮ್ಮನಾದ ಸಾಳುವ ಗೋವಿಂದರಾಯನನ್ನು ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದನು.[8]

ಗಂಗರಾಜನಿಂದ ವಶಪಡಿಸಿಕೊಂಡ ಉಮ್ಮತ್ತೂರು ಪ್ರಾಂತ್ಯದ ಕೆಲ ಭಾಗವನ್ನು ಬೆಂಗಳೂರಿನ ಕೆಂಪೇಗೌಡನಿಗೂ ಆಡಳಿತ ವಹಿಸಿದನು.[9]

ಕೃಷ್ಣದೇವರಾಯನು ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ಮೇಲೆ ಅಧಿಕಾರ ನಿಯಂತ್ರಣ ಹೊಂದಲು ಹದಿನಾಡಿನ ಮೈಸೂರು ಒಡೆಯರು ಸಹಾಯ ಮಾಡಿದರು. ವಿದೇಶಿ ಪ್ರವಾಸಿಗರಾದ 'ಪಯಾಸ್' ಮತ್ತು ನ್ಯೂನಿಜ್ ತಿಳಿಸುವಂತೆ ಶ್ರೀರಂಗಪಟ್ಟಣ ದುರ್ಗವನ್ನು ನೋಡಿಕೊಳ್ಳುತ್ತಿದ್ದ "ಕುಮಾರವೀರ" ಕೃಷ್ಣದೇವರಾಯನ ಮಾವನಾಗಿದ್ದ ತನ್ನ ಮಗಳು ತಿರುಮಲಾಂಬಳನ್ನು ಕೃಷ್ಣದೇವರಾಯನಿಗೆ ವಿವಾಹ ಮಾಡಿದ್ದನು. ಈ ವೈವಾಹಿಕ ಸಂಬಂಧಗಳು ಈ ಪ್ರಾಂತ್ಯದ ಮೇಲೆ ಅಧಿಕಾರ ಸ್ಥಾಪಿಸಲು ಕಾರಣವಾಯಿತ್ತು. ತನ್ನ ಮಾವ ಕೂಡ ಉಮ್ಮತ್ತೂರು ವಿರುದ್ಧ ಹೋರಾಡಲು ಸೈನ್ಯ ಸಹಾಯ ಮಾಡಿದನು.[10]

ಇದಲ್ಲದೆ ಉಮ್ಮತ್ತೂರು ಪಾಳೇಗಾರನ ಅಧೀನಕ್ಕೆ ಸೇರಿದ್ದ ಶ್ರೀರಂಗಪಟ್ಟಣ ಕಾವೇರಿ ನದಿಯಿಂದ ಕೃಷಿ ಯೋಗ್ಯ ಪ್ರದೇಶವಾಗಿತ್ತು. ತಮಿಳುನಾಡಿನ ಪ್ರದೇಶದ ಜಯಗೊಂಡಲ ಪ್ರದೇಶ, ಮಧುರೈ ನಾಯಕರು, ತೆರಕಣಾಂಬಿ, ಕೊಂಗನಾಡು ಪ್ರದೇಶಗಳಿಗೂ ಆಯಕಟ್ಟಿನ ಪ್ರದೇಶವಾಗಿತ್ತು. ಅವರು ಶ್ರೀರಂಗಪಟ್ಟಣ ಪ್ರಾಂತ್ಯದ ಮೇಲೆ ಆಗಾಗ್ಗೆ ಆಕ್ರಮಣ ಮಾಡುವುದನ್ನು ತಡೆಯುವುದು ಹಾಗೂ ಆ ಪ್ರದೇಶಗಳ ಮೇಲೆ ಮುಖ್ಯವಾಗಿ ಕೊಂಗುನಾಡು ಮತ್ತು ತಮಿಳುನಾಡಿನ ಪ್ರದೇಶಗಳ ಮೇಲೆ ನಿಯಂತ್ರಣ ಹೊಂದುವುದಾಗಿತ್ತು.[11]

ಉಮ್ಮತ್ತೂರು ಪಾಳೇಯ ಪಟ್ಟುವಿನ ಮೇಲೆ ವಿಜಯನಗರ ಕೇಂದ್ರಾಡಳಿತದ ಪರಮಾಧಿಕಾರವನ್ನು ಸ್ಥಾಪಿಸಿದ ಮೇಲೆ ಶಿರಪ್ರಧಾನನ ಆಡಳಿತ ಪ್ರಾರಂಭವಾದ ಮೇಲೆ ಉಮ್ಮತ್ತೂರಿನ ಆಡಳಿತವನ್ನು ಶ್ರೀಕೃಷ್ಣದೇವರಾಯನ ಹೆಸರು ಮತ್ತು ಶ್ರೇಷ್ಠತೆ ಮೇಲೆ ನಡೆಸಲಾಗುತ್ತಿತ್ತು. ಕೃಷ್ಣದೇವರಾಯನ ಮಂತ್ರಿ ಸಾಳುವ ತಿಮ್ಮರಸನು ತಮ್ಮ ದೊರೆ ಸಾಳುವ ನರಸಿಂಹವರ್ಮನ ಮಗ ಕೃಷ್ಣವರ್ಮನ ನಿರೂಪದಂತೆ ತಲಕಾಡಿನ ಕೀರ್ತಿನಾರಾಯಣ ದೇವರಿಗೆ ಕಾವಹಳ್ಳಿ ಗ್ರಾಮದ ಕಂದಾಯವನ್ನು ದಾನವಾಗಿ ನೀಡಿದನು.[12]

ಇಲ್ಲಿ ಕೃಷ್ಣದೇವರಾಯನನ್ನು ಕೃತವರ್ಮನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಉಮ್ಮತ್ತೂರು ಪಾಳೇಯ ಪಟ್ಟುವಿನಲ್ಲಿ ನಂಜನಗೂಡಿನಲ್ಲಿದ್ದ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ವಿಭುದೇಂದ್ರ ಯತಿಗಳಿಗೆ ಕೃಷ್ಣದೇವರಾಯನು ಒರಿಸ್ಸಾದ ಗಜಪತಿ ಪ್ರತಾಪರುದ್ರವನ್ನು ಉದಯಗಿರಿಯಲ್ಲಿ ಸೋಲಿಸಿ ದುರ್ಗವನ್ನು ವಶಪಡಿಸಿಕೊಂಡ ನೆನಪಿಗಾಗಿ ಚಿಕ್ಕಕುಳ್ಳಿ ಗ್ರಾಮವನ್ನು ದತ್ತುವಾಗಿ ನೀಡಿದನು.[13]

ಉಮ್ಮತ್ತೂರಿನ ಮಹಾಪ್ರಧಾನವಾಗಿ ನೇಮಕಗೊಂಡ ಸಾಳುವ ಗೋವಿಂದರಾಜ ಒಡೆಯನು ಉಮ್ಮತ್ತೂರಿನ ತಿರುಮಲದೇವರಿಗೆ ಮತ್ತು ತ್ರಿಮಕೂಟದ ಅಗಸ್ತೇಶ್ವರ ದೇವರಿಗೆ ದಾನವನ್ನು ನೀಡಿದನು. ಈ ರೀತಿ ದಾನ ನೀಡುವಂತೆ ಕೃಷ್ಣದೇವರಾಯನ ಆಜ್ಞೆಯಾಗಿತ್ತು.[14]

ಸಾಮಾನ್ಯವಾಗಿ ಹೊಸದಾಗಿ ವಶಪಡಿಸಿಕೊಂಡ ಅಥವಾ ಪರಮಾಧಿಕಾರವನ್ನು ಚಲಾಯಿಸಿದಾಗ ತಮ್ಮ ಅಧಿಕಾರದ ಪ್ರಾಧಾನ್ಯತೆಯನ್ನು ವ್ಯಕ್ತಪಡಿಸಲು ಹಾಗೂ ಆ ಪ್ರದೇಶದ ಜನಬೆಂಬಲ ಗಳಿಸಲು ಅವರ

ಧಾರ್ಮಿಕ ಆಚರಣೆಗೆ ಬೆಂಬಲ ಘೋಷಣೆ ನೀಡುವುದು ರಾಜ್ಯಾಧಿಕಾರ ಪ್ರತಿಪಾದನೆಯ ಸಂಕೇತವಾಗಿತ್ತು. ಉಮ್ಮತ್ತೂರಿನ ಮಹಾಪ್ರಧಾನವಾಗಿ ನೇಮಕಗೊಂಡ ಸಾಳುವ ಗೋವಿಂದರಾಜನು ಉಮ್ಮತ್ತೂರಿನ ದೇವಾಲಯಗಳಿಗೆ ಭೂದಾನ ಮಾಡಿ ವಿಜಯನಗರ ಕೇಂದ್ರ ಅಧಿಕಾರವನ್ನು ಪ್ರಬಲಗೊಳಿಸಿದ್ದನು. ತಿರುಮಕೂಡಲು ನರಸಿಂಹಸ್ವಾಮಿ ದೇವರು ಮತ್ತು ಅಗಸ್ತ್ಯೇಶ್ವರ ದೇವರಿಗೆ ಮೂಗೂರು ಸ್ಥಳದ ಹೊಸಪುರ ಗ್ರಾಮವನ್ನು ದಾನವಾಗಿ ನೀಡಿದನು. ಮರಡೀಪುರದ ಅಗ್ರಹಾರಕ್ಕೆ ಶ್ರೀಕೃಷ್ಣದೇವರಾಯನ ಶ್ರೇಯಸ್ಸಿಗೋಸ್ಕರ ಗ್ರಾಮ ದಾನವನ್ನು ಮಾಡಿದನು.[15]

ಉಮ್ಮತ್ತೂರು ಪಾಳೇಯಪಟ್ಟುವಿನಲ್ಲಿ ಕೃಷ್ಣದೇವರಾಯನ ಅಧಿಕಾರ ಸ್ಥಾಪನೆಯಾದ ಮೇಲೆ ಈ ಪ್ರಾಂತ್ಯದ ಕೆಲವು ಗ್ರಾಮಗಳ ಹೆಸರನ್ನು ಬದಲಾಯಿಸಿ ಕೃಷ್ಣದೇವರಾಯನ ಹೆಸರನ್ನು ಶಾಶ್ವತಗೊಳಿಸಲಾಯಿತ್ತು. ಶ್ರೀ ಕೃಷ್ಣದೇವರಾಯನೇ ಸ್ವತಃ ತಿರುಮಕೂಡಲು ನರಸೀಪುರದ ಸೋಸಲೆ ವ್ಯಾಸಮಠದ ವ್ಯಾಸತೀರ್ಥಮುನಿಗಳಿಗೆ ಜಕ್ಕರಾಜನಹಳ್ಳಿಯನ್ನು ಗ್ರಾಮ ದಾನವಾಗಿ ನೀಡುವಾಗ ಆ ಹಳ್ಳಿಗೆ 'ಕೃಷ್ಣರಾಯಪುರ' ಎಂದು ನಾಮಕರಣ ಮಾಡಿದನು. ಮರಡೀಪುರದ ಅಗ್ರಹಾರಕ್ಕೆ ಮರಡೀಪುರ ಗ್ರಾಮ ದಾನವನ್ನು ಮಾಡಿದಾಗಲೂ ಮರಡೀಪುರಕ್ಕೆ 'ಕೃಷ್ಣರಾಯಪುರ' ಎಂದು ಪುನಃ ನಾಮಕರಣ ಮಾಡಲಾಯಿತು. ಸಾಳುವ ಗೋವಿಂದರಾಜನು ಕಲಿಯೂರು ಗ್ರಾಮವನ್ನು ಬ್ರಾಹ್ಮಣರಿಗೆ ದಾನವಾಗಿ ನೀಡಿದಾಗ ಅದಕ್ಕೆ 'ಕೃಷ್ಣಾಪುರ' ಎಂದು ನಾಮಕರಣ ಮಾಡಿದ್ದನು. ಈ ದಾನಗಳೆಲ್ಲವನ್ನು ಹಂಪೆ ಪಂಪಾಕ್ಷೇತ್ರದ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ನೀಡಲಾಗುತ್ತಿತ್ತು. ಈ ಕಾರ್ಯಗಳೆಲ್ಲವೂ ಉಮ್ಮತ್ತೂರಿನ ಮೇಲೆ ಕೃಷ್ಣದೇವರಾಯನ ಪರಮಾಧಿಕಾರವನ್ನು ಸೂಚಿಸುತ್ತವೆ.[16]

ಇದಲ್ಲದೆ ನಾಡಿನ ಮುಖಂಡರೂ ವರ್ತಕರೂ ಕೂಡ ಕೃಷ್ಣದೇವರಾಯನ ಅಭಿವೃದ್ಧಿ ಶ್ರೇಷ್ಠತೆಯನ್ನು ಬಯಸಿ ಅವನ ಅಧಿಕಾರವನ್ನು ಮನ್ನಿಸಿ ದೇವಾಲಯಗಳಿಗೆ ಹಲವಾರು ದಾನಗಳನ್ನು ಮಾಡಿದ್ದಾರೆ. ಉಮ್ಮತ್ತೂರಿನ ಮಲ್ಲರಸ ಕಾರ್ಯಕರ್ತನು ಪೊರಗಿ ಹಳ್ಳಿಯ ಸೋಮಣ್ಣ ಒಡೆಯನು, ಸೋಸಲೆ ಬಳಿಯ ಕನ್ನೆರುಮಡು ಗ್ರಾಮಸ್ಥರು ಶ್ರೀ ಕೃಷ್ಣದೇವರಾಯನ ಶ್ರೇಯಸ್ಸು ಅಭಿವೃದ್ಧಿಯನ್ನು ಬಯಸಿ ತಿರುಪತಿ ವೆಂಕಟೇಶ್ವರ ದೇವರಿಗೆ ಹಾಗೂ ಹಂಪಿಯ ವಿಠಲದೇವರಿಗೆ ದಾನವನ್ನು ನೀಡಿದ್ದಾರೆ.[17]

ವಿಜಯನಗರ ಕೃಷ್ಣರಾಯನ ರಾಜ ವ್ಯಾಪಾರಿಯಾದ ಬೆಟ್ಟಪ್ಪ ಶೆಟ್ಟಿಯ ಅಣ್ಣ ಶರಣಪ್ಪ ಶೆಟ್ಟಿಯು ಸಾಳುವ ಗೋವಿಂದ ರಾಜನಿಂದ ತಿರುಮಕೂಡಲು ಬಳಿಯ ಅಗಸ್ತ್ಯೇಶ್ವರ ದೇವಾಲಯದ ಸಮೀಪದಲ್ಲಿ ಪಾರ್ವತಿ ದೇವಾಲಯವನ್ನು ನಿರ್ಮಿಸಿದರು. ಪಾರ್ವತಿ ದೇವಿಯ ಅಮೃತ ಪಡಿಗೆ ಹೊನ್ನಾರೆ ಗ್ರಾಮವನ್ನು ದಾನವಾಗಿ ನೀಡಿದರು.[18]

ಉಮ್ಮತ್ತೂರು ಪ್ರಾಂತ್ಯದ ಗ್ರಾಮದಾನಗಳನ್ನು ಕೃಷ್ಣದೇವರಾಯನ ಕೇಂದ್ರ ಸ್ಥಳಕ್ಕೆ, ಅವನ ಆರಾಧ್ಯ ದೇವರಿಗೆ ನಿಡುವುದು ಸಾಮಾನ್ಯವಾಗಿತ್ತು. ಇದು ಉಮ್ಮತ್ತೂರು ಪ್ರದೇಶವು ಕೃಷ್ಣದೇವರಾಯನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಸಾಮಂತರಾಗಿ ಅಧಿಕಾರಿಗಳಾಗಿ ತಮ್ಮ ಅಧಿಕಾರ ನಿಷ್ಠತೆಯನ್ನು ತೋರಿಸುತ್ತದೆ. ಉಮ್ಮತ್ತೂರಿನ ಹಲವು ಗ್ರಾಮಗಳನ್ನು ಹಂಪಿ ವಿಠಲ ದೇವರಿಗೆ ನೀಡಿರುವುದು ವಿಶೇಷ.

ಕೃಷ್ಣದೇವರಾಯನು ತನ್ನ ಮಗನಾದ ತಿರುಮಲರಾಯನನ್ನು ರಾಜ್ಯದ ಉತ್ತರಾಧಿಕಾರಿಯನ್ನಾಗಿ ಗೊತ್ತು ಮಾಡಿದ್ದರೂ, ಅವನು ಒಂದು ವರ್ಷ ಆಡಳಿತದಲ್ಲಿ ಮಂತ್ರಿ ಸಾಳುವ ತಿಮ್ಮರಸನ ಮಗನಿಂದ ವಿಷಪ್ರಾಸನದಿಂದ ಮೃತನಾಗಿದನಷ್ಟೆ. ಆದ್ದರಿಂದ ಕೃಷ್ಣದೇವರಾಯನು ತನ್ನ ಮಲತಮ್ಮನಾದ ಅಚ್ಯುತರಾಯನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದನು.[19]

ಈ ಸಮಯದಲ್ಲಿ ಉಮ್ಮತ್ತೂರು ಪ್ರಾಂತ್ಯದ ಅಧಿಕಾರಿಯು ಕೃಷ್ಣದೇವರಾಯನ ಮಗ ತಿರುಮಲರಾಯ ಮತ್ತು ಉತ್ತರಾಧಿಕಾರಿ ಅಚ್ಯುತರಾಯನು ಅಭಿವೃದ್ಧಿ ಶ್ರೇಷ್ಠತೆಯನ್ನು ಬಯಸಿ ದಾನಗಳನ್ನು ಮಾಡಿದ್ದಾರೆ. ಈ ಸಮಯದಲ್ಲಿ ಸಾಳುವ ಗೋವಿಂದರಾಜನು ತೆರಕಣಾಂಬಿಯ ನಾಯಕತ್ವವನ್ನು ಪಡೆದಿದ್ದಕ್ಕಾಗಿ ಹಂಪಿ ಪಂಪಾಕ್ಷೇತ್ರ ವಿರೂಪಾಕ್ಷ ದೇವರಿಗೆ ದಾನವನ್ನು ನೀಡಿರುವ ಶಾಸನಗಳು ದೊರೆತಿವೆ.[20]

ಕೃಷ್ಣದೇವರಾಯನ ಅಧಿಕಾರ ಕಾಲವೆಂದರೆ, ಅವಿಚ್ಛಿನ್ನ ಯುದ್ಧ ವಿಜಯಗಳ ಕಾಲ. ತನ್ನ ಇಪ್ಪತ್ತು ವರ್ಷಗಳ ಅಧಿಕಾರಾವಧಿಯಲ್ಲಿ ಗೋದಾವರಿಯಿಂದ ಕನ್ಯಾಕುಮಾರಿವರೆಗಿನ ಸಮಸ್ತ ಪಾಳೇಯಗಾರಿಗಳನ್ನು ಕೃಷ್ಣದೇವರಾಯನು ತನ್ನ ಹಿಡಿತಕ್ಕೆ ತಂದುಕೊಂಡಿದ್ದನು. ಉಮ್ಮತ್ತೂರು ನಾಯಕರೊಡನೆ ರಾಜ್ಯಾಧಿಕಾರ ಸ್ಥಾಪಿಸುವಲ್ಲಿಯು ಶುಕ್ರ ನೀತಿಸಾರ, ಮನುಧರ್ಮ ಶಾಸ್ತ್ರ, ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ನಿರೂಪಿತವಾದ ರಾಜನಿತಿ ಸೂತ್ರಗಳನ್ನು ಬಳಸಿ ರಾಜ್ಯಭಾರ ಕ್ರಮವನ್ನು ರೂಪಿಸಿಕೊಂಡಿದ್ದನು. ಗ್ರಂಥ 'ಅಮುಕ್ತಮೌಲ್ಯದ'ದಲ್ಲೂ ಕೃಷ್ಣದೇವರಾಯನ ಕಾಲದ ರಾಜನೀತಿಯು ಒಳಗೊಂಡಿದೆ. ಸಾಮ್ರಾಜ್ಯದ ಏಕತೆ ಮತ್ತು ದೃಢತೆಯನ್ನು ಸ್ಥಾಪಿಸುವಲ್ಲಿಯೂ ಉಮ್ಮತ್ತೂರಿನ ನಾಯಕರೊಂದಿಗಿನ ಸಂಬಂಧಗಳು ಮತ್ತು ಮಹಾಪ್ರಧಾನವಾಗಿ ಸಾಳುವ ಗೋವಿಂದರಾಜನು ಕೈಗೊಂಡ ರಾಜ್ಯಭಾರ ಕ್ರಮಗಳು ರಾಜನೀತಿ ಮೂಲ ಪ್ರಸ್ಥಾನಗಳಾದ ಮಂತ್ರಶಕ್ತಿ, ಪ್ರಭುಶಕ್ತಿ, ಉತ್ಸಾಹ ಶಕ್ತಿಯನ್ನು ಕೃಷ್ಣದೇವರಾಯನ ಪ್ರಜಾಧರ್ಮದ, ಸಾಮಾಜಿಕ ದೃಢತೆಯ, ಏಕತಾತತ್ವದ ಪಾಂಡಿತ್ಯವನ್ನು ನಿದರ್ಶನಗಳನ್ನು ತೋರಿಸುತ್ತದೆ.

**ಕೊನೆಟಿಪ್ಪಣಿ**


1. ರಾಮದಾಸರೆಡ್ಡಿ. ಎನ್.ಜಿ. (2010). ದಕ್ಷಿಣ ಭಾರತದ ಇತಿಹಾಸದ ರಾಜ್ಯ ಮತ್ತು ಸಮಾಜ 1336–1800". ಪುಟ 44.
2. ಕೃಷ್ಣರಾವ್ ಎಂ ವಿ ಮತ್ತು ಕೇಶವಭಟ್ಟ. (1970). ಕರ್ನಾಟಕ ಇತಿಹಾಸ ದರ್ಶನ. ಬೆಂಗಳೂರು. ಪು. 370.
3. Mahalingam. T.V. (1960). Administration and Social Life under Vijayanagara. Part 1. University of Madras, Madras. Pp. 185-191.
4. ಕರ್ನಾಟಕ ಪರಂಪರೆ–ಸಂಪುಟ 2. (1970). ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು ಪುಟ 518.
5. Ishwari Prasad – (1972). History of Mediaval India. Allahabad Pp. 432.
6. ಕೃಷ್ಣರಾವ್ ಎಂ.ವಿ. ಪೂರ್ವೋಕ್ತ–2, ಪುಟ 492.
7. ಅದೇ, ಪುಟ 376

8. ಎಪಿಗ್ರಾಫಿಯಾ ಕರ್ನಾಟಕ ಸಂಪುಟ 4 ಚಾಮರಾಜನಗರ ಶಾಸನ ಸಂಖ್ಯೆ 233.
9. Basavaraja K.R. (1984). History and Culture of Karnataka. Dharwad Pp. 158.
10. Satyanarayana. (1996). A. History of the Wodeyars of Mysore" 1610-1748 Mysore. PP 13-14.
11. Govindaraj. (2008). Some Aspects of Geography and the Fragmented Policy in Karnataka (16th to 18th Century)" Article Presented in 20th European Conference on Modern Asian Studies held at Manchester, UK.
12. ಎಪಿಗ್ರಾಫಿಯಾ ಕರ್ನಾಟಕ ಸಂಪುಟ 3 ನಂಜನಗೂಡು ಶಾಸನ ಸಂಖ್ಯೆ 248.
13. ಅದೇ, ನಂಜನಗೂಡು ಶಾಸನ ಸಂಖ್ಯೆ 110
14. ಅದೇ, ಸಂಪುಟ 3 ನಂಜನಗೂಡು ಶಾಸನ ಸಂಖ್ಯೆ 285
15. ಅದೇ, ಸಂಪುಟ 3 ತಿ.ನರಸೀಪುರ ಶಾಸನ ಸಂಖ್ಯೆ 2, 128, 132, 289
16. ಅದೇ, ಸಂಪುಟ 3 ತಿ.ನರಸೀಪುರ ಶಾಸನ ಸಂಖ್ಯೆ 105, 133, 225
17. ಅದೇ, ಸಂಪುಟ 3 ತಿ.ನರಸೀಪುರ ಶಾಸನ ಸಂಖ್ಯೆ 106 ಮತ್ತು ಸಂಪುಟ 4 ತಿ.ನರಸೀಪುರ ಶಾಸನ ಸಂಖ್ಯೆ 143, 149
18. ಅದೇ, ಸಂಪುಟ 3 ತಿ.ನರಸೀಪುರ ಶಾಸನ ಸಂಖ್ಯೆ 26
19. ಕೃಷ್ಣರಾವ್ ಎಂ.ವಿ. ಪೂರ್ವೋಕ್ತ. ಪುಟ ಸಂಖ್ಯೆ 388
20. ಎಪಿಗ್ರಾಫಿಯಾ ಕರ್ನಾಟಕ ಸಂಪುಟ 3 ಗುಂಡ್ಲುಪೇಟೆ ಶಾಸನ ಸಂಖ್ಯೆ 130, 134, 150, 156.